


ಬಂದಿದ್ದಾರೆ’

ಒಳ ಬಂದ ವ್ಯಕ್ತಿಯನ್ನು ನೋಡಿ ಅವಾಕ್ಕಾದ. ಅರೆ ಇದೇನಿದು ವಾಸ್ತವವೇ ಕನಸಾಗಿದೆ! ಮಾತು ತುಟಿಯಿಂದ ಆಚೆ ಬರುವುದಿತ್ತು, ಅಷ್ಟರಲ್ಲಿ ಬಂದ ವ್ಯಕ್ತಿ ‘ಸರ್ ಖಂಡಿತ ನಾನಲ್ಲ ಅದು’ ಎಂದ.

ಅವನಿಗೆ ಬದುಕು ಬೇಸರ ಅನಿಸಿತು. ಕ್ಷಣ ಸಾವಿನ ಕುರಿತು ಯೋಚಿಸಿದ. ಒಂದು ಪಕ್ಷಿ ಹಳೆಯ ಗೋಡೆಯ ಮೇಲೆ ಕುಳಿತಿದೆ. ಅದರ ಎದುರಿಗೆ ಆನೆಯಾಕಾರದ ಬಂಡೆಯ ಮೇಲೆ ದಢೂತಿ ಓತಿಕ್ಯಾತ. ಅದರ ಕಣ್ಣಿನಲ್ಲಿ ಪಕ್ಷಿಯ ಬಿಂಬ. ಅರೆ ಈ ಮನುಷ್ಯನಿಗೆ ಯಾಕೆ ಈ ಸಾಯುವ ಯೋಚನೆ ಬದುಕಿರುವಾಗ. ಅದು ಬರುವುದು ಗೊತ್ತಾಗುವುದಿಲ್ಲ, ಮತ್ತು ಬಂದು ಹೋದಾಗ ಜೀವವೇ ಇರುವುದಿಲ್ಲ. ಪ್ರಾಣಿ, ಪಕ್ಷಿ, ಜೀವ ಜಂತುಗಳು ಎಂದಾದರು ತಮಗೆ ಅಪಾಯ ಒದಗಿದಾಗ, ಬೇಸರವಾದಾಗ ಆತ್ಮಹತ್ಯೆಯ ಯೋಚನೆ ಮಾಡುತ್ತವಾ? ಹೆಂಡತಿ ಮತ್ತು ಮಗಳಿಗೆ ಸಿನೆಮಾಗೆ ಕರೆದುಕೊಂಡು ಹೋಗಲು ಹೇಳಿದ್ದು ನೆನಪಾಯಿತು.

‘ಅಪ್ಪ ಇನ್ನು ಅರ್ಧ ಗಂಟೆ ಇದೆ ಶೋ ಸ್ಟಾರ್ಟ್ ಆಗುವುದಕ್ಕೆ. ಐಸ್ ಕ್ರೀಮ್ ತಿನ್ನೋಣ’. ಅಲ್ಲಿ ಅವನ ಸ್ನೇಹಿತ. ‘ಏನೋ ಎರಡು ದಿನ ಕಾಣಲಿಲ್ಲ. ಫೋನ್ ಮಾಡಿದ್ರೂ ನಾಟ್ ರೀಚಬಲ್?’ ‘ಫೋನ್ ಪಾಯಸದಲ್ಲಿ ಬಿದ್ದು ಆ ಕತೆ ಹೀಗ್ಯಾಕೆ, ನಾಳೆ ಸಿಗ್ತೀನಿ ಎಲ್ಲ ಹೇಳ್ತೀನಿ’ ಎಂದು ಅವನ ಗೆಳೆಯ ಹೋದ. ಹೋದ ವೇಗದಲ್ಲಿಯೇ ವಾಪಸ್ಸು ಬಂದು, ‘ಪದ್ಮಿನಿ ಸಿಕ್ಕಿದ್ದಳು, ಅದೆ ನೀನು ಅವೊತ್ತು ನ್ಯಾಷನಲ್ ಬಾರಿನಲ್ಲಿ ಕತೆ ಓದಿದ್ದಲ್ಲ ಅದರ ಕಥಾನಾಯಕಿ’ ಎಂದು ಹೇಳಿ ಅವನ ಗೆಳೆಯ ಜನರ ನಡುವೆ ಮರೆಯಾದ.

ಅವರಿಬ್ಬರೂ ಇವನ ಮುಖವನ್ನೇ ನೋಡುತ್ತಿದ್ದರು. ಐಸ್ ಕ್ರೀಮ್ ಕರಗುತ್ತಿತ್ತು.

ನಿಜ ಅಲ್ಲವಾ? ನಿಜ. ಅಲ್ಲವಾ? ಎಲ್ಲೋ ಲಯ ತಪ್ಪಿದೆ. ಹಾಗಾದರೆ ನಿಷ್ಠೆ? ನಿಷ್ಠೆ ಸಮಾಜದ್ದು. ಮನಸ್ಸು ಸೃಷ್ಟಿಯಿಂದ ಆಚೆ ಜಿಗಿದಿದೆ. ಸ್ವತಂತ್ರ. ಭವದಲ್ಲಿ ಬಂಧನ. ಮತ್ತು ಮೀರಿ ಅಲ್ಲವೆ ಸ್ವತಂತ್ರವಾಗಿದ್ದು. ಆಗಿ ಭವದಲ್ಲಿ ಬಂಧನವಾಗಿದ್ದು. ನಿಯಮ ಎಲ್ಲಕ್ಕೂ ಇದೆ. ಪರಿಭ್ರಮಣ, ಗುರುತ್ವ? ಆದರೆ ಮುಂದೆ ಯಾವಾಗಲೋ ನಿಯಮ ಪಲ್ಲಟಗೊಂಡು ಅವಕಾಶದಲ್ಲಿ. ಸೃಷ್ಟಿ ಮತ್ತು ಅವಕಾಶ. ಅವಕಾಶದಲ್ಲೆ ಎಲ್ಲ ಆಗುವುದು. ಆಗುವುದ ನೊ ೀ ಡು ವು ದು ನಿಯಮದಲ್ಲಿ. ನಾನು ಮೀರಬೇಕು. ಆದರೆ ಪಡೆದದ್ದು ಮೀರಬಾರದು. ಬಂಧನ ನನಗೂ ಅದಕ್ಕೂ. ಮತ್ತು ವಿಘಟನೆ. ಛೇ ತತ್ವದ ಬದನೇಕಾಯಿಂದ ಖಾದ್ಯವ ಮಾಡಲಾದೀತೆ?

ಪಾರಿಜಾತದ ನೆರಳು. ಚಿತ್ರ ಬಿಡಿಸಿದಂತೆ. ತೆರೆದಿದೆ ಕಿಟಕಿಯನ್ನು. ಅದರ ಮೂಲಕ ಬೆಳಕು. ಕಿಟಕಿಯ ಚೌಕಟ್ಟು ಯಥಾವತ್ತು ಬಿಂಬ. ಬಂಗಾರದ ಬೆಳಕು. ಅದೇ ಪರದೆ. ಅವಕಾಶ. ಅಲ್ಲಿ ಆಕೃತಿಗಳು. ಗಾಳಿಯ ಸಾಕ್ಷಿಗೆ ಪಾರಿಜಾತದ ಎಲೆಗಳು. ನಡುಮನೆಯಲ್ಲಿ ಉರಿಯುತ್ತಿದೆ ಮೇಣ. ಕರಗಿರುವ ಮೇಣ ಪುರಾತನ ಕಾಲದ ಜ್ವಾಲಾಮುಖಿಯ ಶಿಲೆಯಂತೆ ರೂಪುಗೊಂಡಿದೆ. ಒಂದು ಹೆಂಗಸು ತನ್ನ ತುರುಬನ್ನು ತುದಿಮೊದಲು ಕಾಣದಂತೆ ಕಟ್ಟಿಕೊಂಡು ಅಲ್ಲಿ ಗುಲಾಬಿಯೊಂದನ್ನು ಸಿಕ್ಕಿಸಿಕೊಂಡಿದ್ದಾಳೆ. ಅವಳು ಹಾದು ಹೋದಳು. ಆಕೃತಿಯ ಚಿತ್ರದ ಚಲನೆ. ಮತ್ತೆ ಕತ್ತಲು. ಮೇಣದ ಬತ್ತಿ ಮಂದ್ರ ಸ್ಥಾಯಿಯಲ್ಲಿ ಸೂಸುತ್ತಿದೆ ಬೆಳಕನ್ನು. ಪಾರಿಜಾತದ ಪರಿಮಳ ಒಳಗೆ ಮತ್ತು ಹೊರಗೆ. ವಾಹನ ಸರಿಯುತ್ತಿದೆ ಆ ಹೆಂಗಸು ಸರಿದು ಹೋದ ಮೇಲೆ. ಅದರೊಳಗೆ ಮಲಗಿರುವ ವ್ಯಕ್ತಿ. ಸುತ್ತ ಮತ್ತಷ್ಟು ವ್ಯಕ್ತಿಗಳು. ಶವ ಇರಬೇಕು. ದುಃಖ, ಪಸೆಗೊಂಡ ಕಣ್ಣುಗಳು ಪಾಸಾದವು ಬೆಳಕಿನಲ್ಲಿ. ಹೊರಗಿನ ದುಃಖ ಒಳಗೆ. ದುಃಖವು ಅದ್ಭುತ ಕಲಾಕೃತಿಯಾಗಿದೆ ಅಲ್ಲಿ. ಕಲೆಯಲ್ಲಿ ದುಃಖ ನಿರಂತರ. ಅದರ ಆಚೆ ಅವರು ದಫನ್ ಮಾಡಿ ಮತ್ತೆ ಬೆಳಗ್ಗೆ ಕಾಫಿ ಕಾಯಿಸಲು ಬೆಲ್ಲಕ್ಕೋ ಸಕ್ಕರೆಗೋ ಪರದಾಟ. ದುಃಖ ಕಲೆಯಲ್ಲಿ ಕಲೆಯಾಗಿದೆ. ಅದರಾಚೆ ಮತ್ತಿನ್ನೇನೋ ಘಟಿಸುತ್ತಿದೆ.

ಘಟಿಸಿದ್ದು, ಘಟಿಸಿರಲಿಲ್ಲವೇ?! ಕನಸು ಭ್ರಾಂತಿಯೋ? ಕಾಣಲಿಲ್ಲವೆ, ಇಲ್ಲ ಕಂಡೆ. ಕಾಣಲಿಲ್ಲ. ಅದು ಹೇಗೆ?!

ರಾತ್ರಿ ನಗುತ್ತಿದ್ದ ಪಾರಿಜಾತ ಈಗ ನೆಲದಲ್ಲಿ ಮಲಗಿದೆ. ಹಕ್ಕಿ ಹಾರುತ್ತಿದೆ. ●